REVIEWS OF LITERATURE

ISSN: 2347-2723
IMPACT FACTOR : 3.3754(UIF)
VOLUME - 5 | ISSUE - 3 | OCTOBER - 2017



# ಬಿ.ಟಿ. ಲಲಿತಾ ನಾಯಕರ ಕಾವ್ಯಗಳಲ್ಲಿ ಹೆಣ್ಣು, ಕಪಟ ಮನುಷ್ಯರು ಲಂಬಾಣಿ ಜನಾಂಗ ಕುರಿತು ಚಿಂತನೆ

**ಡಾ. ಶಿವಗಂಗಾ ಯು. ಬಿಲಗುಂದಿ**
ಕನ್ನಡ ಅಧ್ಯಯನ ಸಂಸ್ಥೆ, **ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.**

ಬಿ.ಟಿ. ಲಲಿತಾನಾಯಕ ಅವರು ೧೯೪೫ ಎಪ್ರಿಲ್ ೪ರಂದು ಚಿಕ್ಕಮಂಗಳೂರು ಜಿಲ್ಲೆಯ ಕಡೂರು ತಾಲೂಕಿನ ತೆಂಗಲಿ ತಾಂಡಾದಲ್ಲಿ ಜನಿಸಿದರು. ಬಂಡಾಯ ದಲಿತ ಸಾಹಿತ್ಯ ಚಳುವಳಿಯ ಸಕ್ರೀಯ ಸದಸ್ಯರಾದ ಇವರು ನಾಡಿನಾದ್ಯಂತ ನಡೆದ ಚಳುವಳಿಯಲ್ಲಿ ಭಾಗವಹಿಸಿದ್ದಾರೆ. ಇವರು ನಂರೂಪ್ಲಿ, ಇದೇ ಕೂಗು ಮತ್ತೆ ಮತ್ತೆ ಎಂಬ ಕವನ ಸಂಕಲನಗಳನ್ನು ರಚಿಸಿದ್ದಾರೆ. ಇವರ ಕಾವ್ಯ ಸ್ತ್ರೀಪರ ಹಾಗೂ ಶೋಷಿತರ ಧ್ವನಿಯಾಗಿದೆ. ಪ್ರಸ್ತುತ ಸಾಮಾಜಿಕ, ಧಾರ್ಮಿಕ ವ್ಯವಸ್ಥೆಗೆ ಹಿಡಿದ ಕನ್ನಡಿಯಾಗಿದೆ. ಹೋರಾಟದ ಕಿಚ್ಚು ಅವರ ಕಾವ್ಯಕ್ಕೆ ಕಸವನ್ನು ತಂದುಕೊಟ್ಟಿದೆ.

"ಏಕೆ ಮಲಗಿರುವ ಮುಗುದೆ
.......................................
.......................................
ಈಗ ಯಾರ್‍ಯಾರ ಪಾಲು ?"

ಈ ಕವನದಲ್ಲಿ ಪುರುಷ ಪ್ರಧಾನ ಸಮಾಜವು ಹೆಣ್ಣನ್ನು ತನ್ನ ಉಪಭೋಗದ ವಸ್ತುವನ್ನಾಗಿ ಮಾಡಿಕೊಂಡು ಲಿಂಗ ಅಸಮಾನತೆಯನ್ನು ಈ ಕವನದಲ್ಲಿ ವ್ಯಕ್ತಪಡಿಸಿದ್ದಾರೆ. ಬಯಲು ಕಟ್ಟೆಯ ಮೇಲೆ ಮಲಗಿರುವ ಮುಗುದೆಯನ್ನು ಕಂಡು ಕವಿಗಳು ಮರುಗಿ ಊರು ಜಾನುವಾರಗಳು ತಿವಿದು ಅಟ್ಟೆದ್ದರಿಂದ ಹೀಗೆ ಇಲ್ಲಿಗೆ ಬಂದು ಮಲಗಿರ ಬಹುದೆ? ಇವಳು ಒಂದಾನೊಂದು ಕಾಲದಲ್ಲಿ ಚಂದದ ಗುಲಾಬಿಯಾಗಿರಬೇಕು. ಊರು ಜಾನುವಾರುಗಳ ಹೃದಯವನ್ನು ಆಳಿರಬಹುದು. ಅವರನ್ನು ಕನಸಿನಲ್ಲಿ ಕಾಡಿಸಿರಬಹುದು. ಹಬ್ಬ ಹಬ್ಬಕ್ಕೂ ಹಣತಿಗಳ ಸಾಲು ಹಚ್ಚಿರಬಹುದು. ಹೌದಲ್ಲಿ ಅಕ್ಕಾ ನಿನ್ನ ಮನೆ ಮಠ ಈಗ ಯಾರ್‍ಯಾರ ಪಾಲು ಹೇಳು? ಎಂದು ಕವಿಯು ಕವನದಲ್ಲಿ ವ್ಯಕ್ತಪಡಿಸಿದ್ದಾರೆ.

"ಬಿಟ್ಟೋಡಿದನೇನೆ ಬಯಲಲ್ಲಿ
.......................................
.......................................
ಕಾದಿರುವ ಬಡ ಶಬರಿಯೂ?"[೨]

ನಿನ್ನವನು ಆ ನೀಚ ನಳನಂತೆ ಈ ಬಯಲಿನಲ್ಲಿ ಬಿಟ್ಟೋಡಿದನೆ? ಶ್ರೀರಾಮನ ಅಪ್ಪಗೆಯಂತೆ ಅನಿವಾರ್ಯದ ವನವಾಸಕ್ಕೆ ಒಪ್ಪಿಕೊಂಡಿರುವೆಯಾ? ಧರ್ಮರಾಯನಂತೆ ಜೂಜಾಟದಲ್ಲಿ ಪಣಕೊಡ್ಡಿ ಸೋತನೇ? ಹರಿಶ್ಚಂದ್ರನಂತೆ ಮಾರಿಯೇ ಬಿಟ್ಟನು? ನೆನಪು ಹಾರಿತೆಂದು ದುಷ್ಯಂತನಂತೆ ಹೊರದೂಡಿದೆನೋ? ಆ ತೆವಲು ಸನ್ಯಾಸಿ ಗೌತಮನಂತೆ ಶಾಪಗ್ರಸ್ಥ ಅಹಿಲ್ಯೆಯಾಗೆಸಿದಂತೆ ಮಾಡಿದನೋ? ಅಮ್ಮಾ ಏಳಿನ್ನು ಎನ್ನುವ ಮುದ್ದು ಮಗನ ಕೊಡಲಿ ಏಟಿಗೆ ಸಿಕ್ಕಿ ದಿಕ್ಕೆಟ್ಟ ರೇಣುಕೆಯೇ ನೀನು? ಎಂದೋ ಬರುವ ಮುಕ್ತಿದಾಯಕನಿಗಾಗಿ ಕಾದಿರುವ ಬಡ ಶಬರಿಯೇ ನಾನು ಹೇಳು ಎಂದು ಮರುಗುವವರು ಒಂದು ಕಾಲದಲ್ಲಿ ಅಂದ ಚೆಂದದ ಗುಲಾಬಿಯಾಗಿ ಕಂಪು ಸೂಸಿ ಹಬ್ಬ ಹಬ್ಬಕ್ಕೂ ಹಣತೆ ಸಾಲುಗಳ ಬೆಳಕಾಗಿ ಹೃದಯವಾಸಿಯಾದ ಮುಗುದೆ ಇಂಥ ಅನಾಥ ಸ್ಥಿತಿಗೆ ಬರಲು ಕಾರಣವೇನು? ಪುರುಷ ಪ್ರಧಾನವಾದ ಸಮಾಜದ ಭವ್ಯ ಪರಂಪರೆವಾರಸುದಾರರೇ ಕಾರಣ ಎನ್ನುವರು ಕವಿಗಳು.

"ನಾವು ಅಂಜಬೇಕಾದುದು ಯಾರಿಗೆಂದು

.......................................

.......................................

ರಕ್ತ ತರ್ಪಣ ನೀಡ ಬಯಸುವವರಿಗೆ"[೨]

ನಾವು ಅಚಿಜಬೇಕಾದುದು ಯಾರಿಗೆಂದು ಎಂದಾದರೂ ಯೋಚಿಸಿದ್ದೀರಾ? ದೂರದ ಕಾಡು ಮೋಡಗಳು ಹುಲಿ ಚಿರತೆಗಳಿಗಲ್ಲಿ ಒಪ್ಪತ್ತಿನ ಗಂಜಿಗಾಗಿ ಸುಳ್ಳಾಡುವ ತುಡುಗರಿಗಲ್ಲ ದೆವ್ವ ಭೂತ ದೇವರುಗಳಿಗಲ್ಲ. ಅವುಗಳನ್ನು ನಂಬುವ, ನಂಬಿದಂತೆ ನಟಿಸುವ ಕಪಟಿಗಳಿಗೆ ನಾವು ಅಂಜಬೇಕಾಗಿದೆ. ದೆವ್ವ ಭೂತ ದೇವರುಗಳ ಹೆಸರಿನಲ್ಲಿ ನಮ್ಮನ್ನು ಬಲಿಪೀಠಕ್ಕೆರಿಸಿ ಹೆತ್ತಮಕ್ಕಳ ಕತ್ತು ಕೊಯ್ಯಲು ಹೇಸದವರಿಗೆ ಅಂಜಬೇಕಾಗಿದೆ. ನಮ್ಮ ನಿಮ್ಮ ಕರುಳು ಬಗೆದು ಚಂಡಿ ಚಾಂಮುಂಡಿಯರ ಪಾದದಡಿ ರಕ್ತ ತರ್ಪಣ ನೀಡ ಬಯಸುವವರಿಗೆ ಅಂಜಬೇಕಾಗಿದೆ.

"ಗುಡಿಗೋಪುರಗಳು ಕಳಸದ ನೆರಳಲಿ

.......................................

.......................................

ನಿರ್ಭೀತರಾಗುವವರು ಕ್ಷಣಮಾತ್ರದೊಳಗೆ"[೪]

ಗುಡಿಗೋಪುರ ಕಳಸದ ಕಪ್ಪು ಕೃತ್ಯಗಳಲ್ಲಿ ತೊಡಗುವವರು. ಕೊಟಿ ದೇವರುಗಳ ನಾಮದ ಬಲದಲ್ಲಿ ಮುಗ್ದರನ್ನು ದೋಚುವ ದರೋಡೆಕೋರರಿವರು. ಇವರ ಹೃದಯ ಮಾನವೀಯತೆ ಬತ್ತಿ ಹೋಗಿದೆ. ನುಕಂಪದ ಒರತೆ ಧೂಪ ಸೋಗಿನ ಮಾತುಗಳ ನಡುವೆ ಮುಚ್ಚಿ ಹೋಗಿದೆ. ಕೊರತೆ ತೀರ್ಥದಲ್ಲಿ ಮುಳಗು ಕರ್ಪೂರದಲ್ಲಿ ಬೆಳಗಿ ನೂರು ನರ ಮೇಧಗಳಿಗೆ ಸಿದ್ಧರಾಗುವರು. ರಕ್ತೆ ಸಿಕ್ತ ಕೈಗಳನ್ನು ಭಕ್ತಿ ಹೊಳೆಯಲ್ಲಿ ಅದ್ದಿ ಕ್ಷಣ ಮಾತ್ರದಲ್ಲಿ ನಿರ್ಭಿರಾಗುವರು.

"ಮಾರಾಟವಾಗುವ ಈ ಭಕ್ತಿ ಮುಕ್ತಿಗಳ ಮೌಲ್ಯ

...............................................................

...............................................................

ಹಾದಿ ಸುಮಗಗೊಳಿಸಬೇಕು."[೫]

ಮಾರಾಟವಾಗುವ ಈ ಭಕ್ತಿ ಮುಕ್ತಿಗಳ ಮೌಲ್ಯ ಎಷ್ಟೆಂಬುದನ್ನು ಈಗ ನಾವು ಅರಿಯಬೇಕಾಗಿದೆ. ವಂಚಿಸುವರೂ ಹದ್ದುಗಳ ಉಪಟಳಕ್ಕೆ ಸಂಪೂರ್ಣ ತೆರೆ ಎಳೆಯಬೇಕಾಗಿದೆ. ಹೊಟ್ಟೆ ಬಟ್ಟೆಗಾಗಿ ಬೆವರು ಸುರಿಸುವ, ನ್ಯಾಯವಾಗಿ ಗಳಿಸಿ ಉಣ್ಣುವ, ಮನುಷ್ಯರನ್ನು ಪ್ರೀತಿಸುವ ಹಕ್ಕಿಗಾಗಿ ಹೋರಾಡುವ, ನಿಯತ್ತಿನ ಶಕ್ತಿಗಳೆಲ್ಲವೂ ಒಂದಾಗಬೇಕು. ಮಾನವ ವಿರೋಧಿ ಕ್ರೂರ ನೆಲೆಗಳನ್ನು ಗುರುತಿಸಿ ಬಾಂಬು ಸಿಡಿಸಬೇಕು ವಿಷದ ಕಾಪಟಿಗಳನ್ನೆಲ್ಲ ಕಡಿ ಕಡಿದು ಹಾದಿ ಸುಗಮಗೊಳಿಸಬೇಕು ಎಂದು ಹೇಳಿದ್ದಾರೆ.

"ಬೆಟ್ಟ ಗುಡ್ಡ ಅಲೆಯುತ್ತಿದ್ದ ಕಾಡು ಜನಗಳು

.........................................................

.........................................................

ಲಂಬಾಣಿ ಜನಗಳು."[೬]

ಲಂಬಾಣಿ ಜನಾಂಗದಲ್ಲಿ ಹುಟ್ಟಿ ಬೆಳೆದ ಲಲಿತಾನಾಯಕ ಅವರಿಗೆ ತಮ್ಮ ಜನಾಂದ ಇತಿಹಾಸ ಏಳು ಬೀಳು ಅವರ ಸಮಸ್ಯೆ ಪರಿಹಾರಗಳನ್ನು ಬಲ್ಲವರು. ಈ ಕವನದಲ್ಲಿ ತಮ್ಮ ಜನಾಂದ ಬಗ್ಗೆ ಕುರಿತು ರಚಿಸಿದ್ದಾರೆ. ಬೆಟ್ಟ ಗುಡ್ಡದಲ್ಲಿ ಅಲೆಯುವ ಕಾಡು ಜನಗಳು ನಾವು, ಸೈನ್ಯದಲ್ಲಿ ದುಡಿಯುತ್ತಿದ್ದ ವೀರರು ನಆವು. ಶಿವಾಜಿ, ಪ್ರತಾಪರಂಥ, ರಾಜರನ್ನು ಗೆಲ್ಲಿಸುತ್ತ ಗಾದಿಯಲಿ ಕೂರಿಸುತ್ತ

ಹಿಂದೆ ಹಿಂದೆ ಉಳಿದ ಅಡವಿ ಜನರು ನಾವು. ಹಿಂಡು ದನಗಳನ್ನು ಅಟ್ಟಿಕೊಂಡು ಉಪ್ಪು ಮೆಣಸು ಹೇರಿಕೊಂಡು ಬಿಸಿಲು ಮಳೆಗೆ ಒಗ್ಗಿಗೊಂಡು ಮಾರಿಕೊಂಡು ಬದುಕುತ್ತಿದ್ದ ಶ್ರಮಿಕ ಜೀವಿಗಳು ಲಂಬಾಣಿ ಜನರು.

‘ಅಡವಿ ಬಿಟ್ಟು ತಾಂಡೆ ಕಟ್ಟಿ

…………………………………………………

…………………………………………………

ರಸಿಕ ಜನಗಳಾದೆವು”[೭]

ಅಡವಿಯನ್ನು ಬಿಟ್ಟು ತಾಮಡೆ ಕಟ್ಟಿ ಹತ್ತು ಹಲವು ಕಸಬುಗಳನ್ನು ಕಲಿತು ನಾವು ಈಗ ನಾಡ ಜನರೆಂದು ಹೆಮ್ಮೆ ಪಟ್ಟೆವು ದುಡಿಮೆ ದೇವರೆಂದು ತಿಳಿದು ದುಡಿಯುವ ಜನರಾದೆವು. ಒರಟು ಚಿಂದಿ ಉಡುಪು ತೊಟ್ಟು ಮೈ ಬೆವರ ರಕ್ತ ಬಸಿದು ಉತ್ತಿ ಬಿತ್ತು ಬೆಳೆದೆವು. ಬೆಳೆದುದನ್ನು ಧಣಿಗಳಿಗೆ ಕೊಟ್ಟು ದೀನರಾಗಿ ಉಳಿದೆವು. ನಮ್ಮ ರೂಪ್ಸಿ ರಮಣೀಯರನ್ನು ಕಚ್ಚಿ ಹರುಕ ಧನಿಕ ನಾಯಿಗಳು ಕಣ್ಣು ಹಾಕಿ ಕಾಡುತ್ತಿರುವಾಗ ಮೌನವಾಗಿ ಅತ್ತೇವು ಒಳಗೊಳಗೆ ಹಿಟ್ಟು ನುಚ್ಚು, ಗಿಟ್ಸಿದಾಗ, ತುಣುಕು ರೊಟ್ಟಿ ಸಿಗದೆ ಇದ್ದಾಗ ಒಲೆಯು ಉರಿಯ ಕಾಣದಾಗ ಹಾಡಿ ಕುಣಿದೆವು ಹಸಿವು ದಣಿವು ಮರೆತು ರಸಿಕ ಜನಾಂಗವಾದೆವು.

“ಆದರೀಗ ಮನದ ನೋವು

…………………………………………………

…………………………………………………

ಕೊಬ್ಬಿ ಮರೆರೆವ ವರ್ಗಕಿದನ್ನು ಕೂಗಿ ಹೇಳಬೇಕಿದೆ”[೮]

ಆದರೆ ಈಗ ಮನದ ನೋವು ನಿಜವಾದ ಅರ್ಥವನ್ನು ಪಡೆದಿದೆ ತಡೆಯಲಾಗದಂಥ ರೋಷ ಉಕ್ಕಿ ಭರತವಾಗಿದೆ. ನಮ್ಮ ರಸಿಕ ಹಾಡು ಈಗ ಗುಡುಗಿನಂತೆ ಮೊಳಗಿದೆ. ಕಾಡು ಕಡೆಯ ಬಲ್ಲ ನಾಡು ಕಟ್ಟಬಲ್ಲ ಶಕ್ತಿಯಾಗಿದೆ. ದಲಿತ ತೋಳಲಡಗಿದೆ. ಕೊಬ್ಬಿ ಮೆರೆವ ವರ್ಗಕ್ಕಿದನ್ನು ಕೂಗಿ ಹೇಳಬೇಕಾಗಿದೆ. ಎಂದು ಕವಿಯು ಲಂಬಾಣಿ ಜನಗಳೀಗೆ ಎಚ್ಚರಿಕೆಯ ಮಾತನ್ನು ಕಾವ್ಯದ ಮೂಲಕ ವ್ಯಕ್ತಪಡಿಸಿದ್ದಾರೆ.

## ಅಡಿ ಟಿಪ್ಪಣಿ

೧ ಬಡಿಗೇರ ಮಾಹಾದೇವ : ಹೊಸಗನ್ನಡ ಕಾವ್ಯ. ಪು – ೭೭
೨ ಬಡಿಗೇರ ಮಾಹಾದೇವ : ಹೊಸಗನ್ನಡ ಕಾವ್ಯ. ಪು – ೭೮
೩ ಬಡಿಗೇರ ಮಾಹಾದೇವ : ಹೊಸಗನ್ನಡ ಕಾವ್ಯ. ಪು – ೭೯
೪ ಬಡಿಗೇರ ಮಾಹಾದೇವ : ಹೊಸಗನ್ನಡ ಕಾವ್ಯ. ಪು – ೮೦
೫ ಬಡಿಗೇರ ಮಾಹಾದೇವ : ಹೊಸಗನ್ನಡ ಕಾವ್ಯ. ಪು – ೮೦
೬ ಬಡಿಗೇರ ಮಾಹಾದೇವ : ಹೊಸಗನ್ನಡ ಕಾವ್ಯ. ಪು – ೮೧
೭ ಬಡಿಗೇರ ಮಾಹಾದೇವ : ಹೊಸಗನ್ನಡ ಕಾವ್ಯ. ಪು – ೮೨
೮ ಬಡಿಗೇರ ಮಾಹಾದೇವ : ಹೊಸಗನ್ನಡ ಕಾವ್ಯ. ಪು – ೮೨



**ಡಾ. ಶಿವಗಂಗಾ ಯು. ಬಿಲಗುಂದಿ**
ಕನ್ನಡ ಅಧ್ಯಯನ ಸಂಸ್ಥೆ, **ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.**